ಶ್ರೀ ಜಿ.ಎಸ್. ಶಿವನಂಜಪ್ಪ—ಹಾಕಿಲ್ಲ.

ಶ್ರೀ ಡಿ. ದೇವರಾಜ ಅರಸ್—ನಿಮಗೆ ಸರಿಯಾಗಿ ಗೊತ್ತಿದ್ದರೆ ಹೇಳಿ.

ಶ್ರೀ ಜಿ.ಎಸ್. ಶಿವನಂಜಪ್ಪ—ಕೆಲವು ಹಳ್ಳಿಗಳಿಗೆ ಬೋರ್‌ವೆಲ್ ಹಾಕಿಲ್ಲ.

SRI D. DEVARAJ URS—I will see that borewells are put in the villages where there is scarcity of drinking water.

(*ii*) *re : release of prisoners under Judicial Custody as per directions of the S. C. to the Govt. of Karnataka*

ಶ್ರೀ ಎಂ. ಚಂದ್ರಶೇಖರ್ :—ಸ್ವಾಮಿ, ಅಂಡರ್‌ಟ್ರಯಲ್ ಪ್ರಿಸನರ್ಸ್ ವಿಷಯವಾಗಿ ರೂಲ್ 370ರ ಪ್ರಕಾರ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ.

SRI A. B. JAKANUR (Minister of State for Regulated Markets) :—Sir, I would like to make the following statement :—

There are 2511 undertrials in various Jails in our State as on 15.2.79. In so far as this Government is concerned, no directions have been received from the Supreme Court of India to take action to release all the undertrial prisoners in the State who are kept under Judicial custody for many months without trial and conviction. However, notices have been received in writ Petitions filed by two undertrial prisoners in the Supreme Court of India against their confinement in the Jail. They are 1) U.T No. 8093 Shri Sreedhara Rao and 2) U. T. No. 7437 Shri Shami Uliarit Ullah both charged u/s 302 of IPC in C. R. No. 120/75. These two prisoners were remanded to Judicial custody at the Central Prison, Bangalore on 20th November 1975 by the Chief Jndicial Magistrate Bangalore, This case is pending in Sessions Court since 6th January 1976. Actionhas already been taken to file counter affidavits in these cases before the Supreme Court. There are no undertrials in this State who are kept in the jails without being produced before the Courts. Instructions have been issued to the Inspector General of Police to take pursuant action in all cases involving undertrial prisoners to see that their cases are expedited.

The undertrial prisoners are confined in the jails of the State on warrants issued from the Courts of Magistrates or Sessions Judges and are released only on the specific orders of the Courts. The jail authorities cannot take any unilateral action to release the prisoners unless the Courts concerned order for their release.

ಶ್ರೀ ಎಂ. ಚಂದ್ರಶೇಖರ್ :—ದಿನಾಂಕ ೫ನೇ ಮಾರ್ಚ್ ೧೯೭೯ ರಲ್ಲಿ ಬಿಹಾರ ರಾಜ್ಯದ ಒಂದು ಕೇಸನ್ನು ಇತ್ಯರ್ಥ ಮಾಡುವಾಗ ಆದರಲ್ಲಿ ಕರ್ನಾಟಕ ರಾಜ್ಯ ಜಮ್ಮು ಕಾಶ್ಮೀರ ಮತ್ತು ಉತ್ತರ ಪ್ರದೇಶ ಎಂದು ಸೇರಿಸಿ ಕರ್ನಾಟಕ ರಾಜ್ಯಕ್ಕೂ ಅಫಿಡವಿಟ್ ಫೈಲ್ ಮಾಡುವ ರೀತಿಯಲ್ಲಿ ಆದೇಶ ನೀಡಲಾಗಿದೆ ಯೆಂದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಬಂದಿದೆ. ನಮ್ಮ ರಾಜ್ಯದಲ್ಲಿರತಕ್ಕ ಅಂಡರ್‌ಟ್ರಯಲ್ಸ್‌ನಲ್ಲಿ

ರಾಜಕೀಯ ಅಪರಾಧಿಗಳು ಎಷ್ಟು ಜನ, ಆರ್ಥಿಕ ಅಪರಾಧಿಗಳು ಎಷ್ಟು ಜನ, ಹೀನಕೃತ್ಯಗಳನ್ನು ಮಾಡಿದ ಅಪರಾಧಿಗಳು ಎಷ್ಟು ಜನ ಇದ್ದಾರೆ ? ೬ ತಿಂಗಳಿಗೂ ಹೆಚ್ಚಾಗಿ ಇರತಕ್ಕ ಅಂಡರ್‌ಟ್ರೈಯಲ್ಸ್ ಎಷ್ಟು ಜನ, ಇದ್ದಾರೆ ? ಮತ್ತೊಂದು ವಿಚಾರವೇನೆಂದರೆ ಯಾರು ಬೇಲಬಲ್ ಅಪರಾಧಿಗಳಿದ್ದಾರೆ ಅಂಥವರಲ್ಲಿ ಬೇಲ್‌ಗೆ ಅವಕಾಶವಿದ್ದಂಥವರಿಗೆ ಪರ್ಸನಲ್ಸ್ ಬ್ಯಾಂಡ್ ಮೇಲೆ ಬಿಡಬೇಕು ಎಂದು ಉಚ್ಚ ನ್ಯಾಯಾಲಯದವರು ಆದೇಶ ಕೊಟ್ಟಿದ್ದಾರೆ. ೧೯೭೫ನೇ ಇಸವಿಯಿಂದ ಇತ್ಯರ್ಥ ಮಾಡಿರುವಂಥ ಕೇಸ್‌ಗಳಲ್ಲಿ ಅವರ ಅಪರಾಧ ಏನಾದರೂ ಆಗಲಿ ಶಿಕ್ಷೆ ಆಗಿದ್ದರೆ ೧೯೭೫ ರಿಂದ ೧೯೭೯ ರವರೆಗೆ ಅಂದರೆ ಮೂರು-ಮೂರುವರೆ ವರ್ಷ ಅವಧಿಯಲ್ಲಿ ಅದಕ್ಕೂ ಕಡಿಮೆ ಶಿಕ್ಷೆಯೇನಾದರೂ ಅವರಿಗೆ ಆಗಿದ್ದರೆ ಅಂಥವರನ್ನು ಇಟ್ಟುಕೊಂಡಿದ್ದರೆ ಸರ್ಕಾರ ಮೂಲಭೂತ ಹಕ್ಕಿಗೆ ವಿರುದ್ಧವಾಗಿ ಮಾಡಿದಂತಾಗುತ್ತದೆ ಎಂದು ತಕ್ಷಣ ಬಿಡುಗಡೆ ಮಾಡಬೇಕು ಎಂಬ ಆದೇಶವನ್ನು ಸುಪ್ರೀಂ ಕೋರ್ಟ್ ನೀಡಿದೆ. ಇದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದೀರಿ ? ರಾಜಕೀಯ ಅಪರಾಧಿಗಳು, ನಕ್ಸಲೀಯರ್ಟ್ಸ್‌ಗೆ ಸೇರಿರುವವರು ನಮ್ಮ ರಾಜ್ಯದಲ್ಲಿ ಯಾರಾದರೂ ಇದ್ದಾರೆಯೇ ?

ಶ್ರೀ ಎ. ಬಿ. ಜಕ್ಕೂರ್ :—ಈಗಾಗಲೇ ನಾನು ಹೇಳಿದ್ದೇನೆ. ಸುಪ್ರೀಂ ಕೋರ್ಟಿನಿಂದ ಎಲ್ಲಾ ಅಂಡರ್ ಟ್ರೈಯಲ್ ಪ್ರಿಸಿನರ್ಸ್‌ನ್ನು ಬಿಡುಗಡೆ ಮಾಡಬೇಕೆಂಬ ಆದೇಶ ಬಂದಿಲ್ಲ.

ಶ್ರೀ ಎಂ. ಚಂದ್ರಶೇಖರ್ :—ಯಾರೂ ಅಂಡರ್ ಟ್ರೈಯಲ್ ಪ್ರಿಸಿನರ್ಸ್ ಇದ್ದಾರೆ ಅವರನ್ನು ಸೆಲ್ಫ್ ಬಾಂಡಿನ ಸೆಕ್ಯೂರಿಟಿ ಮೇಲೆ ಬಿಡುಗಡೆ ಮಾಡಬೇಕು, ಎಂಬುದಾಗಿ ಸುಪ್ರೀಂ ಕೋರ್ಟಿನ ಆದೇಶ ಇದೆ. ಅದರ ಪ್ರಕಾರ ಏನು ಮಾಡಿದ್ದೀರಿ ?

ಶ್ರೀ ಎ. ಬಿ. ಜಕ್ಕೂರ್ ;—ಸುಪ್ರೀಂ ಕೋರ್ಟಿನಿಂದ ಅಂತಹ ನಿರ್ದೇಶನ ನಮ್ಮ ಸರ್ಕಾರಕ್ಕೆ ಬಂದಿಲ್ಲ, ಆದರೆ ಸುಪ್ರೀಂ ಕೋರ್ಟಿನ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಂದ ಒಂದು ನೋಟೀಸ್ ಬಂದಿದೆ. ಅದಕ್ಕೆ ನಾವು ಅಫಿಡವಿಟ್ ಫೈಲ್ ಮಾಡಿದ್ದೇವೆ.

We have received a letter from the Asst. Registar of Supreme Court.

The letter says like this :

> "I am directed to request you to forward the particulars of prisoners who have been confined in jail for a period over six months without trial."

As soon as the notice is received, a list of prisoners confined in the Central Jail has been submitted to the Supreme Court in which there were 131 under-trials prisoners who have been confined in the Jail. That list has been submitted to the Court.

ಶ್ರೀ ಎಂ. ಚಂದ್ರಶೇಖರ್ :—ನಮ್ಮ ರಾಜ್ಯದಲ್ಲಿ ಅಂಡರ್ ಟ್ರೈಯಲ್ ಪ್ರಿಸಿನರ್ಸ್ ಎಷ್ಟು ಜನರಿದ್ದಾರೆ ಅವರನ್ನು ಸೆಲ್ಫ್ ಬಾಂಡಿನ ಸೆಕ್ಯೂರಿಟಿ ಮೇಲೆ ಬಿಡುಗಡೆ ಮಾಡಬೇಕೆಂಬ ಸುಪ್ರೀಂ ಕೋರ್ಟಿನ ಆದೇಶದ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಇದು ರಾಜ್ಯಾಂಗದ ೨೧ನೇ ಆರ್ಟಿಕಲ್‌ಗೆ ಮೂಲ ಭೂತವಾಗಿ ವಿರೋಧವಾಗಿರುವುದರಿಂದ, ಕೂಡಲೇ ಅವರನ್ನು ಬಿಡುಗಡೆ ಮಾಡುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಎ. ಬಿ. ಜಕ್ಕೂರ್ :—ಸುಪ್ರೀಂ ಕೋರ್ಟಿನಿಂದ ಆ ತರಹ ಆದೇಶ ನಮಗೆ ಬಂದಿಲ್ಲ. ನೋಟೀಸ್ ಬಂದಿದೆ. ಅದಕ್ಕೆ ನಾವು ಅಫಿಡೆವಿಟ್ ಫೈಲ್ ಮಾಡಿದ್ದೇವೆ. ಇದರಿಂದ ಅಂಡರ್ ಟ್ರೈಯಲ್ ಪ್ರಿಸಿನರ್ಸ್‌ನ್ನು ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಆ ಮಾಹಿತಿ ನನ್ನ ಕಡೆ ಇಲ್ಲ. ಇದಕ್ಕೆ ನಾವು ಪ್ರತ್ಯೇಕವಾಗಿ ಪ್ರಶ್ನೆಯನ್ನು ಕೇಳಿದರೆ ಅದನ್ನು ವಿಚಾರಣೆ ಮಾಡಿಸುತ್ತೇನೆ.

ಶ್ರೀ ಬಾಪುರಾವ್ ದೇಶಪಾಂಡೆ :— ನಾನು ಒಂದು ನೋಟೀಸ್ ಕೊಟ್ಟಿದ್ದೇನೆ, ಅದನ್ನು ನಿನ್ನೆ ದಿವಸ ಚರ್ಚೆ ಮಾಡಲು ಹೊರಟಾಗ ತಾವು ಈ ದಿವಸ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ತಿಳಿಸಿದ್ದೀರಿ. ಇದು ಗುಲ್ಬರ್ಗ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ನಡೆದಂತಹ ಪೋಲೀಸ್ ಅಧಿಕಾರಿಯ ದಬ್ಬಾಳಿಕೆ ದೌರ್ಜನ್ಯದ ಬಗ್ಗೆ ವಿಷಯ ಇದೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಇಲ್ಲಿವೇ ಇದ್ದಾರೆ ಈ ಒಂದು ಘಟನೆ ೨೦ನೇ ತಾರೀಖಿನಂದು ನಡೆದಿದೆ. ಒಬ್ಬ ಸಾಮಾನ್ಯ ನಾಗರೀಕನಿಗೆ ಸಂಬಂಧ ಪಟ್ಟಿದು. ಇವತ್ತು ಆ ಬಗ್ಗೆ ಮೇಲ್ಮನೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಉತ್ತರ ವನ್ನು ಕೊಡುತ್ತಾರೆಂದು ಕೇಳಿದ್ದೇನೆ. ಇಲ್ಲಿಯೂ ಅದರ ಬಗೆ ಉತ್ತರವನ್ನು ಕೊಟ್ಟರೆ ಒಳ್ಳೆಯ ದಾಗುತ್ತದೆ, ಆದ್ದರಿಂದ ಇದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು.

ಗುಲ್ಬರ್ಗ ಜಿಲ್ಲೆಯ ಆಳಂದ್ ತಾಲ್ಲೂಕಿನ ಸ್ಥಳದಲ್ಲಿ ೨೦ನೇ ತಾರೀಖು ಸುಮಾ ೭-೩೦ ರಂದು ಅಲ್ಲಿಯ ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯ ಪ್ರಚಾರಕರಾದ ಶ್ರೀಮಾನ್ ರಾಮಪ್ಪ ಎಂಬುವವರನ್ನು ಪೇಟೆ ಬೀದಿಯಲ್ಲಿ ೪-೫ ಜನ ಸುಮ್ಮನೆ ಮಾತನಾಡಿಕೊಂಡು ನಿಂತುಕೊಂಡಿದ್ದಂತಹ ಸಮಯದಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮೋಟಾರ್ ಸೈಕಲಿನ ಮೇಲೆ ಬಂದು ಇಲ್ಲಿ ಏನು ಕೆಲಸ ನಿಮಗೆ ಎಂದುವಾಗಿ ಕೇಳಿ, ನೀವು ಪೋಲೀಸ್ ಠಾಣೆಗೆ ಬನ್ನಿ ಎಂದುವಾಗಿ ಹೇಳಿದರು. ಆದಕ್ಕೆ ಸಾಮಾನ್ಯ ಏನು ತಪ್ಪು ಮಾಡದೆ ಪೋಲೀಸ್ ಠಾಣೆಗೆ ಏಕೆ ಬರಬೇಕೆಂದು ಹೇಳಿದಾಗ, ಆ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ರಾಮಪ್ಪನ ಕುತ್ತಿಗೆ ಪಟ್ಟಿಗೆ ಕೈಹಾಕಿ ಎಳೆಯುಕೊಂಡು ಹೋಗಿ ಪೋಲೀಸ್ ಠಾಣೆಯಲ್ಲಿ ಕೂಡಿ ಹಾಕಿದರು. ನಂತರ ಪೋಲೀಸ್ ಪೇದೆ ಬಂದಾಗ ಆತನನ್ನು ಅರೆಸ್ಟ್ ಮಾಡಿದ್ದೇನೆಂದು ಮೇಲೆ ಹೊರಟು ಹೋಗಿಬಿಟ್ಟರು. ಏತಕ್ಕಾಗಿ ಅರೆಸ್ಟ್ ಮಾಡಿದ್ದೀರಿ ಎಂಬುದಾಗಿ ಕೇಳಿದಕ್ಕೆ ಮೇಲಿನ ಅಧಿಕಾರಿಗಳು ಬಂದು ವಿಚಾರಣೆ ನಡೆಸಿದ ನಂತರ ಬಿಡುಗಡೆ ಮಾಡಿದ್ದಾರೆ. ಈ ರೀತಿಯಾಗಿ ಅಕ್ರಮವಾಗಿ ಬಂಧಿಸಿ, ಪೇಟೆ ಬೀದಿಯಲ್ಲಿ ೬ ಜನರು ಇದ್ದಂತವ ಸ್ಥಳದಲ್ಲಿ ಒಬ್ಬ ಜವಾಬ್ದಾರಿಯುತ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಕಾನೂನು ಪೋಲು ಮಾಡಬೇಕಾದರೆ ನಾಗರೀಕರಿಗೆ ಪುಂಡರಿಂದ ಆಗುತ್ತಿರುವ ತೊಂದರೆಗಳು ಇನ್ನು ಬಹಳ ಕೆಟ್ಟ ದ್ದಾಗಿರುತ್ತದೆ. ಈ ರೀತಿಯ ಒಬ್ಬ ಸಾಮಾನ್ಯ ನಾಗರೀಕನನ್ನು ಅಪಮಾನ ಮಾಡಿ, ಅಕ್ರಮವಾಗಿ ಬಂಧಿಸಿರತಕ್ಕಂಥ ಘಟನೆ ನಡೆದಿದೆ. ನಾಗರೀಕರ ಸ್ವಾತಂತ್ರ್ಯ ಹಕ್ಕು ಏನಿದೆ ಆ ಪ್ರಕಾರ ಆತನಿಗೆ ಸ್ವಾತಂತ್ರ್ಯ ಸಿಕ್ಕಿದೆ, ಈ ರೀತಿಯ ಘಟನೆಗಳು ಆಗಾಗ್ಗೆ ನಮ್ಮ ರಾಜ್ಯದಲ್ಲಿ ನಡೆಯುತ್ತಿವೆ. ಇದೇ ರೀತಿಯ ಇನ್ನೊಂದು ಘಟನೆಯನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಮುಖ್ಯ ಮಂತ್ರಿಗಳ ಧೋರಣೆಗಾಗಿ ಬೆಳಗಾಂ ಜಿಲ್ಲೆಯ ಸ್ವಾತಂತ್ರ್ಯ ಯೋಧರು ಹೋದಾಗ ಅವರನ್ನು ಪೋಲೀಸ್ ಅಧಿಕಾರಿಗಳು ಕೆಲವರನ್ನು ಕಟ್ಟಿಹಾಕಿದ್ದಂತಹ ಘಟನೆ ನಡೆದಿದೆ. ಈ ರೀತಿ ಪೋಲೀಸರ ದೌರ್ಜನ್ಯ, ದುರ್ವಾಶಿಕೆಯಿಂದ ನಾಗರೀಕರ ಒಂದು ಕಾರ್ಯಕಲಾಪಕ್ಕೆ ಚಟುವಟಿಕೆಗೆ ಬಹಳಷ್ಟು ತೊಂದರೆಯಾಗುತ್ತದೆ. ಇವರ ಬಗ್ಗೆ ಸರ್ಕಾರ ತಪ್ಪಿತಸ್ಥ ಅಧಿಕಾರಿಯ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತದೆ ? ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕು.

SRI S. R. BOMMAI :— Sir, this adjournment motion is a very important one in which fundamental question i.e, freedom of the individual is involved-whether it is done to 'A' organisation or 'B' organisation. I would like to know whether any case has been registered against this individual under Penal Code/and whether any non-bailable warrant is issued? Then only the Police can take action if there is any offence committed by him. So, whether any case was registered and if so was it non-bailable? Otherwise, how is that a Sub-Inspector without any case being registered could arrest a person and insult him in a public market place and take him to the police station, release after there was an agitation and demonstration and also after the intervention of superior officers in the matter. It is a very serious matter. It is a dereliction of duty on the part of the Sub Inspector. The least we could expect that he should be suspended immediately

and action has to be taken after thorough investigation to safeguard the law and order situation in the State and also to see that individuals are free in the State. Though the emergency ended, in some places, officers of the Government still think that there is emergency and could do anything they like. I would like to know from the Hon. Chief Minister what action has been taken against this officer.

ಶ್ರೀ ಡಿ. ದೇವರಾಜ ಅರಸ್:- ಸ್ವಾಮಿ ಮೊದಲು ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಭ.ವೂರಾವ್ ದೇಶಪಾಂಡೆಯವರು ನಮಗೆ ಕಳುಹಿಸಿರತಕ್ಕಂಥ ನಿಲುವಳಿ ಸೂಚನೆ, ಅದನ್ನು ತಾವು ಬೇರೆ ಸೆಕ್ಷನ್‌ನಲ್ಲಿ ಡಿಸ್‌ಕಷನ್ ಮಾಡುವುದಕ್ಕೆ ನನಗೆ ಕಳುಹಿಸಿಕೊಟ್ಟಿದ್ದೀರಿ. ಅದರ ಪ್ರಕಾರ ಏನಿದೆ ಎಂಬುದನ್ನು ಮಾನ್ಯ ಸಭೆಗೆ ಮೊದಲು ತಿಳಿಸಬೇಕು. ನಂತರ ಉತ್ತರ ಹೇಳುತ್ತೇನೆ. ಅವರು ತಮ್ಮ ನೋಟೀಸಿನಲ್ಲಿ ಏನು ಹೇಳಿದ್ದಾರೆಂದರೆ:—

"ಆಳಂದ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಅಣ್ಣಾಗಾವ್ ಪುಣೇಕರ್ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕ ಶ್ರೀ ರಾಮಪ್ಪ ಅವರನ್ನು ತಾ ೨೧ ಮಾರ್ಚ್ ೧೯೭೯ ಸಂಜೆ ೭-೩೦ಕ್ಕೆ ಪೇಟೆಯಲ್ಲಿ ಖಾದಿ ಭಂಡಾರದ ಹತ್ತಿರ ವಿನಾಕಾರಣವಾಗಿ ಹಿಡಿದು ಪೋಲೀಸ್ ಠಾಣೆಯವರೆಗೆ ಎಳೆದುಕೊಂಡು ಹೋಗಿ ಠಾಣೆಯಲ್ಲಿ ಕಾನೂನು ವಿರುದ್ಧ ಬಂಧಿಸಿಟ್ಟು ಅಕ್ರಮ ಅನಾಗರೀಕ ವರ್ತನೆಯ ಬಗ್ಗೆ ಚರ್ಚಿಸಲು ಸಭೆಯು ಕಾರ್ಯಕಲಾಪಗಳನ್ನು ಮುಂದೂಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಘಟನೆಯ ವಿವರ ತಾ ೨೧ ಮಾರ್ಚ್ ೧೯೭೯ರಂದು ಸಂಜೆ ೭-೩೦ ಸುಮಾರಿಗೆ ಶ್ರೀ ರಾಮಪ ಅವರು ಪೇಟೆಯಲ್ಲಿ ಖಾದಿ ಭಂಡಾರದ ಎದುರುಗಡೆ ತಮ್ಮ ಸ್ನೇಹಿತರೊಡನೆ ಮಾತನಾಡುತ್ತಿದ್ದರು. ಆಗ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಅಣ್ಣಾರಾವ್ ಪುಣೇಕರ್ ಅವರು ಅಲ್ಲಿಗೆ ಮೋಟ್‌ರ್ ಬೈಕ್‌ನಲ್ಲಿ ಬಂದರು ಮತ್ತು 'ಯಾರ್ಯಾರು ನಿಂತಿದ್ದೀರಿ' ಎಂದು ಶ್ರೀ ರಾಮಪ್ಪನವರನ್ನು ಕೇಳಿದರು. 'ಯಾಕೆ' ಅಂತ ಶ್ರೀ ರಾಮಪ್ಪ ಮರುಪ್ರಶ್ನೆ ಮಾಡುತ್ತಲೂ 'ಸ್ಟೇಷನ್ನಿಗೆ ನಡೆಯಿರಿ' ಹೇಳುತ್ತೇನೆ ಎಂದರು. 'ಸ್ಟೇಷನ್ನಿಗೆ ಬರಲು ನಾವೇನು ಮಾಡಿದ್ದೇವೆ' ಎಂದು ಶ್ರೀ ರಾಮಪ್ಪ ಕೇಳಿಕೊಂಡದ್ದೇ ತಡ ಸಬ್ ಇನ್ಸ್‌ಪೆಕ್ಟರ್ ಅವರ ಷರ್ಟಿನ ಕಾಲರ್ ಹಿಡಿದು ಎಳೆದರು. ಗುದ್ದಾಟ ಬೇಡವೆಂದು ಶ್ರೀ ರಾಮಪ್ಪ 'ನಾವೇನೂ ಕಳ್ಳರಲ್ಲ' ಸ್ಟೇಷನ್ನಿಗೆ ಬರುತ್ತೇವೆ ನಡೆಯಿರಿ ಎಂದೂ ಹೇಳಿದ ಮೇಲೂ ತುಂಬಿದ ಪೇಟೆಯಲ್ಲಿ ಅವರನ್ನು ಎಳೆದುಕೊಂಡೇ ಠಾಣೆಗೆ ಒಯ್ದರು. ಅಲ್ಲಿಯ ಪೋಲೀಸ್ ಪೇದೆಗೆ ಇವನನ್ನು ಒಳಗೆ ಕೂಡ್ರಿಸು ಎಂದು ಹೊರಟು ಹೋದರು. 'ಯಾಕೆ' 'ಏನು' ಎಂದು ಕೇಳಿದಾಗ ನಿನ್ನನ್ನು ಅರೆಸ್ಟ್ ಮಾಡಿದ್ದೇನೆ ಎಂದರು.

ನಂತರ ನೂರಾರು ಜನ ಸೇರಿ ಶ್ರೀ ರಾಮಪ್ಪ ಅವರ ಬಿಡುಗಡೆಗೆ ಒತ್ತಾಯ ಮಾಡಿದರು. ಅನಂತರ ಡಿ.ವೈ.ಎಸ್.ಪಿ. ಸರ್ಕಲ್ ಇನ್ಸ್‌ಪೆಕ್ಟರ್ ಬಂದು ಅವರನ್ನು ಬಿಡುಗಡೆ ಮಾಡಿದರು.

ಈ ಅಪಮಾನ ಮತ್ತು ಅಕ್ರಮ ಬಂಧನದ ವಿಚಾರಣೆಯಾಗಬೇಕು. ಇದನ್ನು ಮಾನ್ಯ ಸದಸ್ಯರು ತಮ್ಮ ಸೂಚನೆಯಲ್ಲಿ ಹೇಳಿದ್ದಾರೆ.

ಇದು ಕಂಪ್ಲೈಂಟು. ಇನ್ನು ತಾರೀಖು ೨೧ ಮಾರ್ಚ್ ೧೯೭೯ರ ಪೋಲೀಸ್ ವರದಿಯನ್ನು ಕೂಡ ಮಾನ್ಯ ಸದಸ್ಯರ ಮುಂದೆ ಓದುವುದಕ್ಕೆ ಇಷ್ಟಪಡುತ್ತೇನೆ:—

> ತಾ॥ ೨೧ ಮಾರ್ಚ್ ೧೯೭೯ರ ಸಂಜೆ ಸುಮಾರು ೭-೩೦ರ ಸಮಯದಲ್ಲಿ ಆಲಂದ್ ಪೋಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಅಣ್ಣಾರಾವ್ ಪುಣೇಕರ್ ಮೋಟಾರ್ ಸೈಕಲಿನಲ್ಲಿ ಠಾಣೆಗೆ ಬರುತ್ತಿದ್ದರು. ದಾರಿಯಲ್ಲಿ ಠಾಣೆಯಿಂದ ಸುಮಾರು ೫೦ ಗಜ ದೂರ ನಗರದ ಖಾದಿ ಭಂಡಾರದ ಬಳಿ ೭-೭ ಜನರ ರಸ್ತೆಯಲ್ಲಿ ನಿಂತಿದ್ದುದರಿಂದ ಸಂಚಾರಕ್ಕೆ ಅಡಚಣೆ ಆಗಿದ್ದನ್ನು ಸಬ್ ಇನ್ಸ್‌ಪೆಕ್ಟರ್ ಕಂಡರು. ಸಬ್ ಇನ್ಸ್‌ಪೆಕ್ಟರ್ ಸದರಿ ಜನರು ದಾರಿ ಬಿಡದಿದ್ದುದನ್ನು ಕಂಡು ಅವರನ್ನು ಪಕ್ಕಕ್ಕೆ ಹೋಗುವಂತೆ ಹೇಳಿದರು. ಅವರಲ್ಲಿ ೪-೫ ಜನರು ಪಕ್ಕಕ್ಕೆ ಹೋಗಿರು. ಶ್ರೀ ರಾಮಪ್ಪ ಮತ್ತು ಇನ್ನೊಬ್ಬರು ಅಲ್ಲಿಯೇ ನಿಂತಿದ್ದರು. ಸಬ್ ಇನ್ಸ್‌ಪೆಕ್ಟರ್ ರಾಮಪ್ಪನವರ ಹೆಸರು ಮತ್ತು ವಿಳಾಸ ಕೇಳಿದಾಗ, ಕೊಡಲು ನಿರಾಕರಿಸಿದರು. ಆಗ ಅವರ

ಜೊತೆಯಲ್ಲಿದ್ದ ಮತ್ತೊಬ್ಬ ವ್ಯಕ್ತಿ ಅಲ್ಲಿಂದ ಓಡಿ ಹೋದರು. ಸಬ್ ಇನ್ಸ್‌ಪೆಕ್ಟರ್ ರಾಮಪ್ಪ ನವರನ್ನು ಠಾಣೆಗೆ ಬರುವಂತೆ ಹೇಳಿದಾಗ, ಅವರು ಬರಲು ನಿರಾಕರಿಸಿದರು. ರಾಮಪ್ಪನವರ ಮೇಲೆ ಕಾನೂನು ರೀತಿ ಕ್ರಮ ತೆಗೆದುಕೊಳ್ಳುವುದಕ್ಕೋಸ್ಕರ ಸಬ್ ಇನ್ಸ್‌ಪೆಕ್ಟರ್‌ರವರು ರಾಮಪ್ಪನವರನ್ನು ಸ್ಥಳದಲ್ಲಿ ದಸ್ತಗಿರಿ ಮಾಡಿ ಬಲತ್ಕಾರವಾಗಿ ಠಾಣೆಗೆ ಕರದುಕೊಂಡು ಹೋದರು. ಅನಂತರ ಸ್ವಲ್ಪ ಹೊತ್ತಿನಲ್ಲಿ ಠಾಣೆಯ ಮುಂದೆ ನೆರೆದಿದ್ದ ಸುಮಾರು ನೂರು ಜನರ ಗುಪ್ಪೊಂದು ರಾಮಪ್ಪನವರ ಬಿಡುಗಡೆಗೆ ಒತ್ತಾಯಪಡಿಸುತ್ತಿತ್ತು. ಠಾಣೆಯ ಮಹಡಿಯ ಮೇಲಿದ್ದ ಸರ್ಕಲ್ ಇನ್ಸ್‌ಪೆಕ್ಟರ್‌ರವರು ವಿಷಯ ತಿಳಿಯಲು ಠಾಣೆಗೆ ಬಂದರು. ಆಗ ರಾಮಪ್ಪನವರು ಠಾಣೆಯ ರೈಟರ ಕೋಣೆಯ ಬೆಂಚಿನ ಮೇಲೆ ಕುಳಿತಿದ್ದರು. ಇದೇ ಸಮಯದಲ್ಲಿ ಡಿ.ಎಸ್.ಪಿ ಯವರು ಠಾಣೆಗೆ ಬಂದರು ಡಿ.ಎಸ್.ಪಿ.ಯವರು ರಾಮಪ್ಪನವರನ್ನು ವಿಚಾರಿಸಿ ಈ ವಿಚಾರದ ಬಗ್ಗೆ ತ್ವರಿತ ತನಿಖೆ ನಡೆಸುವುದಾಗಿ ಭರವಸೆ ಕೊಟ್ಟರು. ನೆರೆದಿದ್ದ ಜನರಿಗೆ ಸಮಾಧಾನ ಹೇಳಿ ಕಳುಹಿಸಲಾಯಿತು. ರಾಮಪ್ಪನವರು ಠಾಣೆಯಲ್ಲಿ ಕೆಲವೇ ನಿಮಿಷಗಳು ಇದ್ದುದಾಗಿ ತಿಳಿದು ಬಂದಿದೆ. ಡಿ.ಎಸ್.ಪಿ.ಯವರು ಘಟನೆಯ ಬಗ್ಗೆ ಅರ್ಜಿ ಕೊಡುವಂತೆ ರಾಮಪ್ಪನವರಿಗೆ ಹೇಳಿ ಅವರನ್ನೂ ಸಹ ಕಳುಹಿಸಿಕೊಟ್ಟರು.

ಶ್ರೀ ರಾಮಪ್ಪನವರ ದುರ್ವರ್ತನೆಯ ಬಗ್ಗೆ ಆಲಂದ್ ಪೋಲೀಸರು ಕರ್ನಾಟಕ ಪೋಲೀಸ್ ಕಾಯಿದೆಯ ೯೨ನೇ ಕಲಂನ ಪ್ರಕಾರ ಕ್ರಮ ಕೈಗೊಂಡಿದ್ದು, ತನಿಖೆ ಮುಂದುವರಿಯುತ್ತಿದೆ.

ಶ್ರೀ ರಾಮಪ್ಪನವರು ತಾ ೨೨ ಮಾರ್ಚ್ ೧೯೭೯ರಲ್ಲಿ ಘಟನೆಯ ಬಗ್ಗೆ ಅರ್ಜಿಯನ್ನು ಡಿ.ಎಸ್.ಪಿ.ಯವರಿಗೆ ಸಲ್ಲಿಸಿದ್ದು ಡಿ.ಎಸ್.ಪಿ.ಯವರು ಅರ್ಜಿಯ ತನಿಖೆ ನಡೆಸುತ್ತಿದ್ದಾರೆ.

ವಿಚಾರಣೆಯ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದ್ದಕ್ಕೆ ಅವರು ಕೇಳಿರುವ ವಿಚಾರ ಏನು ಎಂಬುದನ್ನು ತಿಳಿಸಬೇಕಾದುದು ಇದೆ. ಇಲ್ಲಿ ಮೈಸೂರ್ ಪೋಲೀಸ್ ಆಕ್ಟ್ ೧೯೬೫ ಇದೆ. ಅದರಲ್ಲಿ ಸೆಕ್ಷನ್ ೭೪ನ್ನು ತೆಗೆದುಕೊಂಡರೆ ಅದು ಈ ರೀತಿ ಹೇಳುತ್ತದೆ.

Under Section 74 of the Act-When Police Officer may arrest without warrant-'A Police Officer may arrest without warrant any person committing in his presence in any street or public place any non-cognizable offence punishable under this Act, or under any rule made thereunder and for which no express provison has been made elsewhere, or under any other law for the time being in force, if such person-

(i) after being warned by a Police Officer persists in committing such offence, or

(ii) refuses to accompany the Police Officer to a Police station on being required to do so.

Section 92 which come under Chapter 8 of the police Act is a big section and there are so many sub clauses. I will read the relevant sub section (0) which reads:

'wilfully and indecently expose his person, uses indecent language or behaves indecently or riotously or in a disorderly manner in a street or place of public resort, or in any public office;

Sub section (q) reads :

'wilfully pushes, presses, hustless, or obstructs any passenger in a street, or disturbs the public peace or order, by violent movements, menacing gestures wanton personal annoyance, screaming, shouting, wilfully frightening horses or cattle, or otherwise.'

ಈ ಸೆಕ್ಷನ್ಸ್‌ಗಳ ಆಧಾರದ ಮೇಲೆ ಅವರು ಕೇಸನ್ನು ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಆದರೆ ನಾವು ಸುಮ್ಮನಿದ್ದರೂ ಈ ರೀತಿಯಾಗಿ ಪೋಲೀಸ್ ಅಧಿಕಾರಿ ದುರುದ್ದೇಶದಿಂದ ಮಾಡಿದ ಎಂಬುದು ಅವರ ಆಪಾದನೆ. ಅವರು ತಮ್ಮ ದೂರನ್ನು ಡಿ.ವೈ.ಎಸ್.ಪಿ.ಗೆ ಕೊಟ್ಟಿದ್ದಾರೆ; ಅವರು ಅದನ್ನು ನೋಡುತ್ತಿದ್ದಾರೆ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಇರುವುದು ಕಳೆದ ೮ ತಿಂಗಳುಗಳಿಂದ. ಆರ್.ಎಸ್.ಎಸ್.ನ ಸಂಚಾಲಕರು ೬ ತಿಂಗಳ ಹಿಂದೆ ಟ್ರಾನ್ಸ್‌ಫರ್ ಆಗಿದ್ದಾರೆ. I am told, in the organisation they have a method of transferring persons from place to place. He is also transferred there. That is the position.

ಶ್ರೀ ಎಸ್. ಆರ್. ಬೊಮ್ಮಾಯಿ— ಮಾನ್ಯ ಮುಖ್ಯ ಮಂತ್ರಿಗಳು ವಿವರವಾಗಿ ಉತರ ಹೇಳಿದ್ದಾರೆ. ಅವರು ಹೇಳಿದ ರೀತಿಯಲ್ಲಿ ಕಾನೂನು ಪ್ರಕಾರ ರಸ್ತೆಯಲ್ಲಿ ತಪ್ಪು ಮಾಡಿದವನನ್ನು ಬಂಧಿಸತಕ್ಕ ಅಧಿಕಾರ ಪೋಲೀಸ್ ಅಧಿಕಾರಿಗಳಿಗೆ ಇದೆ. ಸರ್ವೇ ಸಾಮಾನ್ಯವಾಗಿ ನಾವು ಬೆಂಗಳೂರು ನಗರದಲ್ಲಾಗಲೀ ಅಥವಾ ಬೇರೆ ಯಾವುದೇ ನಗರದಲ್ಲಾಗಲೀ ಓಡಾಡುತ್ತಿರುವಾಗ ಜನ ಗುಂಪುಗುಂಪಾಗಿ ನಿಂತಿರತಕ್ಕದ್ದನ್ನು ಕಾಣುತ್ತೇವೆ. ನಿಲ್ಲುವುದಿಲ್ಲವೆಂದು ಹೇಳುವುದಿಲ್ಲ. ಎಷ್ಟೋ ಸಾರಿ ನಾವು ಕಾರಿನಲ್ಲಿ ಹೋಗುವಾಗ ಅವರೊಡನೆ ಮಾತನಾಡಿ ಮುಂದೆ ಹೋಗತಕ್ಕದ್ದು ಇದೆ. ಆದರೆ ಒಬ್ಬ ಸಬ್ ಇನ್‌ಸ್ಪೆಕ್ಟರ್ ಆಗಲಿ ಅಥವಾ ಯಾವುದೇ ಅಧಿಕಾರಿಯಾಗಲಿ, ರಸ್ತೆಯಲ್ಲಿ ಳಿ ಜನ ನಿಂತಿದ್ದರೆ ಅವರೊಂದಿಗೆ ವ್ಯವಹಾರಿಕ ದೃಷ್ಟಿಯಿಂದ ಯಾವ ರೀತಿ ನಡೆದುಕೊಳ್ಳಬೇಕೆಂಬ ಬಗ್ಗೆ ಮಾತನಾಡುತ್ತೇನೆ. ಈಗ ದೂರು ಕೊಟ್ಟಿರತಕ್ಕ ಘಟನೆ ಬಗ್ಗೆ ವಿಚಾರಣೆಯಾಗಲಿ; ಈಗ ನಾನು ಆ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಸರ್ವೇ ಸಾಮಾನ್ಯವಾಗಿ ಯಾವ ಒಬ್ಬ ಅಧಿಕಾರಿ ಮೋಟರ್ ಬೈಕ್‌ನಲ್ಲಿ ಬಂದರೂ ಕೂಡ ಜನ ಪಕ್ಕಕ್ಕೇ ಸರಿದೇ ಸರಿಯುತ್ತಾರೆ. ನಿಂತಲ್ಲೇ ನಿಂತಿರುತ್ತಾರೆ ಅನ್ನಿಸುವುದಿಲ್ಲ. ಆದರೆ ಈ ಘಟನೆಯಲ್ಲಿ ಏನೋ ಹಿನ್ನೆಲೆ ಇದೆ. ಸಬ್ ಇನ್‌ಸ್ಪೆಕ್ಟರ್ ಸೆಲ್ಫ್ ಡಿಫೆನ್ಸ್ ಕೇಸನ್ನು ರಿಜಿಸ್ಟರ್ ಮಾಡಿಕೊಂಡಿರಬಹುದು. ಆದರೆ ಸಬ್ ಇನ್‌ಸ್ಪೆಕ್ಟರ್ ಆದವರು ರಸ್ತೆಯಲ್ಲಿರತಕ್ಕ ಜನ ಸಂಚಾರಕ್ಕೆ ಅಡ್ಡಿಯಾಗಿದ್ದರೆ ಹ್ಯಾಂಡಲ್ ಮಾಡತಕ್ಕ ರೀತಿಯ ಬಗ್ಗೆ ಹೇಳುತ್ತಿದ್ದೇನೆ. ಆ ರೀತಿ ಆಗಬಾರದು. ಇಂಥ ಚಿಕ್ಕ ಪುಟ್ಟ ಘಟನೆಗಳು ಮೇಲಿಂದ ಮೇಲೆ ನಡೆಯತ್ತವೆ. ಆದರೂ ಅರೆಸ್ಟ್ ಮಾಡತಕ್ಕದ್ದು ಸೂಕ್ತ ವಲ್ಲವೆಂದು ಸಧ್ಯಕ್ಕೆ ಹೇಳುತ್ತೇನೆ. ಏಕೆಂದರೆ ವಿಚಾರಣೆ ನಡೆಯುತ್ತಿದೆ. ಓಟ್ಟಿನಲ್ಲಿ ರಾಮಪ್ಪನವರು ಕೊಟ್ಟ ದೂರನ್ನು ಸರಿಯಾಗಿ ವಿಚಾರಣೆ ಮಾಡುವ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಬಿ. ಪಾಟೀಲ್— ಉದಾಹರಣೆಗೆ ನಮ್ಮ ಆಳಂದ ತಾಲ್ಲೂಕಿನ ಸಬ್ ಇನ್‌ಸ್ಪೆಕ್ಟರ್ ಮನೆ ಮುಂದೆ ಒಂದು ಟ್ರಾಕ್ಟರ್ ಹೋದರೆ ಸಾಕು ಅದನ್ನು ಹಿಡಿದು ಕೇಸು ಹಾಕುತ್ತಾರೆ. ಹೀಗಾಗಿ, ಅಲ್ಲಿ ಇದ್ದಂತಹ ಬೇರೆ ಪಕ್ಷದ ಜನಗಳು ಆ ಊರನ್ನು ಬಿಟ್ಟು ಬೇರೆ ಊರಿಗೆ ಹೋಗುತ್ತಿದ್ದಾರೆ

ಶ್ರೀ ಬಾವೂರಾವ್ ದೇಶಪಾಂಡೆ:— ಮಾನ್ಯ ಮುಖ್ಯಮಂತ್ರಿಗಳು ಪೋಲೀಸ್ ಅಧಿಕಾರಿಗಳ ಜವಾಬ್ದಾರಿಯನ್ನು ಹೇಳಿದ್ದಾರೆ. ಆದರೆ ಪೋಲೀಸ್ ಅಧಿಕಾರಿಗಳ ಮುಂದೆ ಮಾನ್ಯ ರಾಮಪ್ಪನವರು ಏನು ಒಂದು ತಮ್ಮ ದೂರನ್ನು ಕೊಟ್ಟಿದ್ದಾರೆ, ಅದನ್ನು ಪರಿಶೀಲಿಸಿದ್ದಾರೆಯೇ ಎಂದು ಕೇಳಬಯಸುತ್ತೇನೆ. ಅದು ವಿಚಾರಣೆಯಾಗಲಿ ತೊಂದರೆಯಿಲ್ಲ. ಎರಡನೆಯದಾಗಿ ಒಬ್ಬ ನಾಗರೀಕನನ್ನು ಪೋಲೀಸ್ ಠಾಣೆಗೆ ಎಳೆದುಕೊಂಡು ಹೋಗುವುದಾಗಲೀ ಅಥವಾ ಒಂದೆರಡು ಗಂಟೆಗಳ ಕಾಲ ಅಕ್ರಮವಾಗಿ ಬಂಧಿಸುವುದಾಗಲೀ ನ್ಯಾಯವೇ ಎಂದು ಕೇಳುತ್ತೇನೆ. ಆದಕ್ಕೆ ಹಿಂದಿನ ಘಟನೆಗಳನ್ನು ಹೇಳಿದೆ. ಮೇಲಾಗಿ ವಿಚಾರಣೆ ಮಾಡುವುದಕ್ಕಿಂತ ಮುಖ್ಯವಾಗಿ ಪೋಲೀಸ್ ಅಧಿಕಾರಿಗಳು ಜವಾಬ್ದಾರಿಯುತವಾಗಿ ವರ್ತಿಸಿದ್ದಾರೆಯೇ ಎಂಬುದು ಒಂದು ಪ್ರಶ್ನೆಯಾಗಿದೆ. ಏಕೆಂದರೆ ಇಲ್ಲಿ ನಾಗರೀಕರ ಗೌರವದ

ಪ್ರಶ್ನೆ ಇದೆ; ಸ್ವಾತಂತ್ರ್ಯದ ಪ್ರಶ್ನೆ ಇದೆ. ಆ ದೃಷ್ಟಿಯಿಂದ ಇದರಲ್ಲಿ ಬೇರೆ ಅಪರಾಧಗಳು ಇದ್ದರೆ ಆ ವಿಷಯ ಬೇರೆ. ಇಂಥ ವಿಷಯದಲ್ಲಿ ಬೇರೆ ಕಡೆಯಿಂದ ಬಂದಿರತಕ್ಕ ಸಾರ್ವಜನಿಕ ಕಾರ್ಯಕರ್ತನ ಬಗ್ಗೆ ಸಾರ್ವಜನಿಕ ಸ್ಥಳದಲ್ಲಿ ಅಪಮಾನವಾಗುವ ರೀತಿಯಲ್ಲಿ ಅಧಿಕಾರಿಗಳು ವರ್ತಿಸುವ ಬಗ್ಗೆ ಯೋಚನೆ ಮಾಡಬೇಕಾಗಿದೆ. ಒಟ್ಟಿನಲ್ಲಿ, ಆ ಬಗ್ಗೆ ಕೂಲಂಕುಷವಾಗಿ ವಿಚಾರಣೆ ನಡೆಯುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಎಚ್. ಗಂಗಾಧರನ್.—ಪೋಲೀಸಿನವರು ಕೊಟ್ಟ ವರದಿಯನ್ನು ಓದಿದರೆ ತಮಗೇ ಗೊತ್ತಾಗುತ್ತದೆ. ಇದರಲ್ಲಿರುವ ಪ್ರಕಾರ ಕಂಪ್ಲೈನೆಂಟ್ ಯಾರೂ ಇಲ್ಲಾ. ಸೆಕ್ಷನ್ ೯೨ (ಬಿ) ಮತ್ತು (ಎಫ್) ಪ್ರಕಾರ ಇವರು ಅಪರಾದ ಮಾಡಿದ್ದಾರೆಯೇ ಎನ್ನುವುದಕ್ಕೆ ಇದರಲ್ಲಿ ಯಾವ ಕಂಪ್ಲೈಟ್ ಕೂಡ ಇಲ್ಲ. ಮತ್ತು ಅವರು ಏನು ಮಾಡಿದರು ಎನ್ನುವುದೂ ಕೂಡ ಇದರಲ್ಲಿ ಇಲ್ಲ. ಈ ಸೆಕ್ಷನ್ ಯಾವಾಗ ಬರುತ್ತದೆ ಎಂದರೆ ಅವರೇನಾದರೂ ಅಪರಾಧ ಮಾಡಿದ್ದರೆ ಆವಾಗ ಈ ಸೆಕ್ಷನ್ ಬರುತ್ತದೆ ಆದುದರಿಂದ ಇದರಲ್ಲಿ ಒಂದು ಆಡಚಣೆ ಬರುತ್ತದೆ. It is not a preventive Section. It is a Section which takes action if an offence is committed ಇದರಲ್ಲಿ ಕಂಪ್ಲೈನೆಂಟ್ -ಅವರೇ ಮತ್ತು ಇನ್‌ವೆಸ್ಟಿಗೇಟರ್ ಸಬ್ ಇನ್‌ಸ್ಪೆಕ್ಟರೇ ಆಗಿರುವುದರಿಂದ ಈ ಎರಡೂ ಕೆಲಸವನ್ನು ಅವರೇ ತೆಗೆದುಕೊಂಡಿರುವುದರಿಂದ ಇದನ್ನು ಬಗೆಹರಿಸುವುದು ಕಷ್ಟವಾಗಿದೆ. ಇದನ್ನು ಬೇರೆಯವರು ಮಾಡುವುದಕ್ಕೆ ಅವರು ದಾರಿ ಮಾಡಿಕೊಟ್ಟಿಲ್ಲಾ. ಈ ಬಗ್ಗೆ ಅವರು ಅಪರಾಧ ಮಾಡಿರುವುದೇ ಅಲ್ಲದೆ ಮತ್ತು ಅವರು ಪೋಲೀಸ್ ಇಲಾಖೆಗೆ ಅಗೌರವವನ್ನೂ ಕೂಡ ತೋರಿಸಿದ್ದಾರೆ. ಇದೇನಾದರೂ ಒಂದು ವೇಳೆ ಕೋರ್ಟ್‌ನಲ್ಲಿ ಸಾಬೀತು ಆಗದೇ ಹೋದರೆ, ಈ ಕೇಸ್ ಏನಾದರೂ ಫೇಲ್ ಆದರೆ ಆ ಅಧಿಕಾರಿಯನ್ನು ಏನಾದರೂ ಡಿಸ್ಮಿಸ್ ಮಾಡುತ್ತೀರಾ? Whether the Hon. Chief Minister is going to dismiss that Sub-Inspector because of his uncivilised behaviour with the citizen ?

10-30 A.M.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದನ್ನು to some extent, I can understand. ಆದರೆ ಆ ಮಾನ್ಯ ಸದಸ್ಯರು ಏನು ಹೇಳುತ್ತಾರೆ ಎಂದರೆ ಇವರನ್ನು ವಿನಾಕಾರಣ ಹಿಡಿದಿದ್ದಾರೆ. ಮತ್ತು ಈ ಕೇಸು ಕೋರ್ಟ್‌ನಲ್ಲಿ ಸಾಬೀತು ಆಗದೇ ಹೋದರೆ ಡಿಸ್ಮಿಸ್ ಮಾಡುತ್ತೀರಾ ಎಂದು ಒಂದು ಅಸಮ್‌ಷನ್ ಇಟ್ಟುಕೊಂಡು ಮಾತನಾಡಿದ್ದಾರೆ These are all assumptions for which I cannot answer. ಸಾಮಾನ್ಯವಾಗಿ ಹೇಳಬೇಕಾದರೆ ಪೋಲೀಸಿನವರು ಏನಾದರೂ ಕೆಲಸ ಮಾಡಿದರೆ ಏತಕ್ಕೆ ಈರೀತಿ ಮಾಡಿದರುಅಂತ ಹೇಳುತ್ತಾರೆ, ಅವರೇನಾದರೂ ಕೆಲಸ ಮಾಡದೇಹೋದರೆ ಅವರು ಏಕೆ ಮಾಡಲಿಲ್ಲಾ ಎಂದು ಹೇಳುತ್ತಾರೆ. ಹೀಗಾದರೆ ಅವರು ಹೇಗೆ ಕೆಲಸ ಮಾಡಬೇಕು ಹೇಳಿ. ಇಲ್ಲದೇ ಹೋದರೆ ಅವರು ಈರೀತಿ ಕೆಲಸ ಮಾಡಬೇಕು ಎಂದು ಒಂದು ಕೋಡ್ ಬರೆದುಕೊಡಿ. ಆದನ್ನು ಅಸೆಂಬ್ಲಿ ಮುಂದೆ ಇಡೋಣ, ಆದರಂತೆ ಪೋಲೀಸಿನವರು ಆಕ್ಟ್ ಮಾಡಲಿ. ನಾನು ತಮಗೆ ಹೇಳಬೇಕಾದರೆ ಯಾರಾದರೂ ಆಗಲಿ ಸಭ್ಯ ನಾಗರೀಕರಾದವರು ಆ ಮಧ್ಯರಾತ್ರಿಯಲ್ಲಿ ಆ ಸಬ್‌ಇನ್‌ಸ್ಪೆಕ್ಟರೊಂದಿಗೆ ಮಾತನಾಡಬಾರದಾಗಿತ್ತು. ಅವರು ಆರ್.ಎಸ್.ಎಸ್. ನವರು ಅಂತ ಹೇಳಿದರು. Accidentally it happens that this gentleman belongs to R.S.S. Even otherwise, if any man is standing in the street and obstructing the passengers and vehicles, the Police people will come and ask him to clear the way. So, according to the report, this man was standing in the street and obstructing the passengers and vehicles and when the police asked him to clear the way, he persisted in standing. I don't say that it is so. This is the report that I have received. ಅವರು ನಾನು ಏನೂ ಹೇಳಿಲ್ಲಾ, ಅವರು ಸುಮ್ಮನೆ ಹಿಡಿದುಕೊಂಡು ಹೋದರು, ಅಂತ ಹೇಳುತ್ತಾರೆ. ಆದರೆ ಅವರು ಏತಕ್ಕೆ ಕಂಪ್ಲೈಂಟ್ ಕೊಟ್ಟಿದ್ದಾರೆ ಹೇಳಿ. ಏನು ಬಂದರೂ ಕೂಡ ಪೋಲೀಸಿನವರನ್ನು ಆಕ್ಟ್ ಮಾಡಬೇಡಿ ಎಂದು ಹೇಳಿದರೆ ಅದು ಸರಿಯೆ ಇದನ್ನು ನಾವೂ ನೋಡಿಲ್ಲವಾ,

ನೀವೂ ನೋಡಿಲ್ಲಾ, ಅವರು ಇವರು ಹೇಳಿದ್ದನ್ನು ಹೇಳುತ್ತಾ ಇದ್ದೀವೆ. Please don't assert on these matters. The complaint is that about half a dozen people were there and 4 of them immediately cleared the way and the other two were standing and when the Police asked him to clear the way, one fellow ran away and this gentleman persisted in standing. So, he called him to the Police Station and when he did not come, he took him up. This is a fact. Why he took him? Is it right? I cannot judge. The officer in charge who is entrusted with the maintenance of law and order has to do all these things. Let us not carry this too far. I don't know whether there was any malice or ill will between this man and that man. ಪ್ರತಿಯೊಂದಕ್ಕೂ ತಪ್ಪು ಕಂಡುಹಿಡಿದರೆ ಪೋಲೀಸಿನವರನ್ನು ರಜಾ ತೆಗೆದುಕೊಳ್ಳಿ, ನೀವೇನೂ ಕೆಲಸಮಾಡಬೇಡಿ ಎಂದು ಹೇಳಬೇಕಾಗುತ್ತದೆ. Accidently tha has happened. That is why I agree for one thing. I would ask th Dy. S. P. not to take sides or anything and impartially make enquiries and find out whether this Sub-Inspector has acted bona-fide and mala-fide. That I understand and I am prepared to concede. I will certainly ask the Inspector General of Police to ask the Dy. S. P. to make an impartial enquiry on the complaint given by Sri Ramappa.

(iii) *re: release of Book "Archeology of Coorg" by Dr. K. K. Subbayya*

Mr. SPEAKAR.—Sri Quamaral Islam may raise a matter under Rule 312.

† Sri QUAMARAL ISLAM (Gulbarga).—Yesterday, I have raised the matter under Rule 312 regarding a book "Archeology of Coorg" written by Dr. K. K. Subbayya of Mysore University which is full of unjustified attacks, false statements and unfair criticism against Tippu Sultan. This author of "Archaeology of Coorg" has insulted the Tippu Sultan who was a freedom fighter. He is a self-styled historian and now a days, so many self-styled historians have come up. They are insulting the religions, The book written by this author contains false and prejudicial statments. I would like to quote some extracts from that book "Storm over Srirangapatam" written by Mr. Praxy Fernandes. It reads thus :

> "Many figures of Indian history are generally misunderstood. None more so, however, than Tippu Sultan who disputed the expansion of the British Empire in India during the last decades of the Eighteenth Century. His father and he not only carved out a kingdom for themselves in their troubled times and ruled it with an iron hand but disputed